INTERNATIONAL RESEARCH JOURNAL OF MANAGEMENT SOCIOLOGY & HUMANITIES

ISSN 2277 – 9809 (online)
ISSN 2348 - 9359 (Print)

An Internationally Indexed Peer Reviewed & Refereed Journal

www.IRJMSH.com
www.isarasolutions.com

Published by iSaRa Solutions

ಡಾ.ಬಾಬಾಸಾಹೇಬ ಅಂಬೇಡ್ಕರ ಮತ್ತು 'ಹಿಂದೂ ಕೋಡ ಬಿಲ್'ನ ಪ್ರಸ್ತುತತೆ.

1. Dr. M B SALAGARE,
Teaching Assistant Dept, of History And Tourism Rani Channama University P G Centre, Vijayapur Karnataka

2. Dr. Ramesh Kamble
Assistant Professor Dept, of History Rani Channama University P G Centre, Vijayapur Karnataka

ಭಾರತದ ಸರ್ವಾಂಗೀಣ ಅಭಿವೃದ್ಧಿಗೆ ಮಹಿಳೆಯರ ಪಾತ್ರ ಅಗ್ರಗಣ್ಯವಾದುದು.ವೇದಕಾಲದಿಂದ ಆಧುನಿಕ ಕಾಲದವರೆಗೂ ಮಹಿಳೆ ನಡೆದು ಬಂದಿರುವ ಸುದೀರ್ಘ ಪಯಣದಲ್ಲಿ ಹಲವಾರು ಏಳುಬೀಳುಗಳು, ಅಡೆತಡೆಗಳಿದ್ದವು.ಅವುಗಳನ್ನು ದಾಟಿ ಬರುತ್ತಿದ್ದಾಳೆ.ಅನೇಕ ಸಂದಿಗ್ಧ ಪರಿಸ್ಥಿತಿಯ ನಡುವೆಯೂ ಹಲವಾರು ಸಮಾಜ ಸುಧಾರಕರು ಮಹಿಳಾ ವಿಮೋಚನೆಗೆ ಹೋರಾಟ ಮಾಡಿದ್ದಾರೆ. ಅಂತಹ ಮಹನೀಯರಲ್ಲಿ ಭಗವಾನ ಗೌತಮ್ ಬುದ್ಧ, ಬಸವಣ್ಣ, ಕಬೀರ, ಮಹಾತ್ಮ ಜ್ಯೋತಿರಾವ್ ಫುಲೆ, ಮಾತೋಶ್ರೀ ಸಾವಿತ್ರಿಬಾಯಿ ಫುಲೆ, ನಾರಾಯಣ ಗುರು, ಇ.ವ್ಹಿ.ರಾಮಸ್ವಾಮಿ ಪೆರಿಯಾರ್ ಮುಂತಾದವರ ಹೋರಾಟವನ್ನು ಮರೆಯುವಂತಿಲ್ಲ. ಅಲ್ಲದೇ ಡಾ.ಬಾಬಾಸಾಹೇಬ ಅಂಬೇಡ್ಕರರು ಮಹಿಳೆಯರನ್ನು ಸಾಮಾಜಿಕ,ಆರ್ಥಿಕ,ರಾಜಕೀಯ ಹಾಗೂ ಧಾರ್ಮಿಕ ಕ್ಷೇತ್ರಗಳಲ್ಲಿ ಸಾಮಾಜಿಕ ನ್ಯಾಯ ಹಾಗೂ ಸಮಾನತೆಯನ್ನು ತರುವಲ್ಲಿ ಹಗಲಿರುಳು ಶ್ರಮಿಸಿ ಕಾನೂನಿನ ಚೌಕಟ್ಟಿನಲ್ಲಿ ಅವರಿಗೆ ಮಾನವ ಹಕ್ಕುಗಳನ್ನು ದೊರೆಯುವಂತೆ ಮಾಡಿರುವುದು ಚಿರಸ್ಮರಣೀಯವಾದುದು. ಪ್ರಸ್ತುತ ಈ ಪ್ರಬಂಧದಲ್ಲಿ ಪ್ರಾಚೀನ ಕಾಲದಿಂದ ಆಧುನಿಕ ಕಾಲದವರೆಗೆ ಭಾರತೀಯ ಮಹಿಳೆಯರ ಮೇಲಿನ ಶೋಷಣೆ, ದೌರ್ಜನ್ಯಗಳನ್ನು ತಡೆಗಟ್ಟಲು ಡಾ.ಬಾಬಾಸಾಹೇಬ ಅಂಬೇಡ್ಕರರು 'ಹಿಂದೂ ಕೋಡ ಬಿಲ್'ನ್ನು ಸಂಸತ್ತಿನಲ್ಲಿ ಮಂಡಿಸಿದರು.ಈ ಬಿಲ್‌ನಲ್ಲಿ ಮಹಿಳಾ ಮಿಸಲಾತಿಯ ಪರಿಕಲ್ಪನೆ ನೀಡುವುದರ ಮುಖಾಂತರ 'ಮಹಿಳಾ ವಿಮೋಚನೆ' ಗೆ ನಾಂದಿ ಹಾಡಿದರು. ಅಂದು ಸಂಸತ್ತಿನಲ್ಲಿ ಮಂಡಿಸಿದ 'ಹಿಂದೂ ಕೋಡ ಬಿಲ್' ಇಂದಿನ ಸಮಕಾಲಿನ ಭಾರತದಲ್ಲಿ ಸಹ ಅಂಬೇಡ್ಕರ ಚಿಂತನೆಗಳ ಪ್ರಸ್ತುತತೆ ಹಾಗೂ ಜಲ್ವಂತ ವಿಷಯದ ಚರ್ಚೆಯೇ ಈ ಅಧ್ಯಯನದ ಉದ್ದೇಶವಾಗಿದೆ.

ಈ ಮೊದಲು ನಡೆದ ಎಲ್ಲ ಹೋರಾಟಗಳು ಸಮಾಜ ಸುಧಾರಣಾ ಚಳುವಳಿಗಳಾಗಿದ್ದವು. ೨೦ನೇ ಶತಮಾನದಲ್ಲಿ ಅಂಬೇಡ್ಕರರ ಆಗಮನದೊಂದಿಗೆ ಮಹಿಳಾ ವಿಮೋಚನಾ ಚಳುವಳಿಗಳು ಬೇರೆ ಬೇರೆ ಆಯಾಮ ಪಡೆದುಕೊಂಡವು.ಬಾಬಾಸಾಹೇಬರು ಪ್ರಸಿದ್ಧ ಕಾನೂನು ತಜ್ಞರಾಗಿದ್ದರು.ಈ ದೇಶದಲ್ಲಿ ಮನೆಮಾಡಿದ್ದ ಅಸಮಾನತೆಯನ್ನು ಹೊಡೆದೊಡಿಸಲು ಅವರು ೧೯೨೭ ರಲ್ಲಿ ಮಹಾಡ್ ಸತ್ಯಾಗ್ರಹವನ್ನು ಕೈಗೊಂಡರು.ಇದರಲ್ಲಿ ಮಹಿಳೆಯರಿಗೆ ಭಾಗವಹಿಸಲು ಪ್ರೇರೆಪಿಸಿದರು. ಇದರಿಂದಾಗಿ ಭಾರತದ ಇತಿಹಾಸದಲ್ಲಿ ಮಹಿಳಾ ವಿಮೋಚನೆಗೆ ಹೊಸ ಕ್ರಾಂತಿಯ ಅಲೆಯನ್ನು ಹುಟ್ಟುಹಾಕಿ ಈ ದೇಶದಲ್ಲಿನ ಹಲವಾರು ಜಿಡ್ಡುಗಟ್ಟಿದ ಸಂಪ್ರದಾಯಗಳಾದ ಜಾತಿವ್ಯವಸ್ಥೆ, ವರ್ಣವ್ಯವಸ್ಥೆ, ದೇವದಾಸಿ ಪದ್ಧತಿ, ಜೋಗತಿ, ಪತ್ರ:ಆರಾಧಿ ಮುಂತಾದವುಗಳ ವಿರುದ್ಧ ಹೋರಾಟ ಕೈಗೊಳ್ಳುತ್ತಾರೆ. ಒಮ್ಮೆ ಮಹಿಳೆಯರನ್ನು ಕುರಿತು 'ಇಂಥ ಅನಿಷ್ಟ ಪದ್ಧತಿಯಿಂದ ಮಹಿಳೆಯರಿಗೆ ಬಿಡುಗಡೆಯಾಗದ ಹೊರತು ಅವರಿಗೆ ವಿಮೋಚನೆ ಇಲ್ಲ' ಎಂದು ಅಂಬೇಡ್ಕರರು ಹೇಳಿರುವುದು ಮಹಿಳಾ ಜನಾಂಗವು ಸವಾಲಾಗಿ ತೆಗೆದುಕೊಂಡಾಗ ಮಾತ್ರ ಸಮಾಜದ ಉದ್ಧಾರ ಸಾಧ್ಯವೆಂದರು.ಮಹಿಳೆಯರ ಉದ್ಧಾರ ಮತ್ತು ಶಿಕ್ಷಣಕ್ಕಾಗಿ ಪ್ರಪ್ರಥಮ ಬಾರಿಗೆ ಬಾಂಬೇ ಮತ್ತು ಔರಂಗಾಬಾದ್‌ದಲ್ಲಿ ಕಾಲೇಜುಗಳನ್ನು ಸ್ಥಾಪಿಸಿದರು.ಇಂಥ ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸಿ ಶಿಕ್ಷಣವನ್ನು ನೀಡಿದ್ದಾರೆ.'ಸಮಾಜವು ಉನ್ನತಿಯಾಗಬೇಕಾದರೆ' ಆ ಸಮಾಜದ ಸ್ತ್ರೀಯರ ಪರಿಸ್ಥಿತಿ ಸುಧಾರಿಸಬೇಕು' ಎಂದರು.ಮುಂದುವರೆದು ಭಾರತ ದೇಶದ ಜನಸಂಖ್ಯೆಯ ಬೆಳವಣಿಗೆ ಈ ಸಮಾಜವನ್ನು ಇಕ್ಕಟ್ಟಿಗೆ ಸಿಲುಕಿಸಿತು.ಆದ್ದರಿಂದ ಜನಸಂಖ್ಯಾ ಬೆಳವಣಿಗೆಯನ್ನು ನಿಯಂತ್ರಿಸಲು ಹಾಗೂ ಮಕ್ಕಳನ್ನು ಹೆರುವ ಯಂತ್ರಗಳಾಗಿರುವ

ಮಹಿಳೆಯರು ಹಾಗೂ ಕುಟುಂಬದ ಆರೋಗ್ಯದ ರಕ್ಷಣೆಗೆ ಕುಟುಂಬ ಯೋಜನೆಯ ಅಗತ್ಯತೆಯನ್ನು ಸ್ಪಷ್ಟಪಡಿಸಿದರು.ಇದಲ್ಲದೇ ದುಡಿಯುವ ಮಹಿಳೆಯರಿಗೆ ಹೆರಿಗೆ ಭತ್ಯೆ ಹಾಗೂ ಆ ಸಮಯದಲ್ಲಿ ಅವರಿಗೆ ಹೆರಿಗೆ ರಜೆ ಮಂಜೂರಿಯನ್ನು ಮೊಟ್ಟಮೊದಲ ಬಾರಿಗೆ ಮಂಡಿಸಿದರು.

ಮಹಿಳೆಯರ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿ ಸುದಾರಿಸದೇ ಯಾವುದೇ ದೇಶದ ಅಭಿವೃದ್ಧಿ ಸರ್ವಾಂಗೀಣ ಅಭಿವೃದ್ಧಿ ಸಾಧ್ಯವಿಲ್ಲವೆಂಬ ಅಂಶವನ್ನು ಮನಗಂಡ ಡಾ.ಅಂಬೇಡ್ಕರರು ಮಾನವತಾವಾದಿ ಆಂದೋಲನವಾದ ಮಹಿಳಾ ಸಬಲೀಕರಣದ ಅನಿವಾರ್ಯತೆಯಿದೆ ಎಂದು ಹೇಳಿದರು.ಇದು ಅವಿದ್ಯಾವಂತ ಮಹಿಳೆಯರ ಮೇಲೂ ಹೆಚ್ಚಿನ ಪ್ರಭಾವಬೀರಿತ್ತು.ಜುಲೈ ೨೦, ೧೯೪೨ ರಂದು ನಾಗಪುರದಲ್ಲಿ ಅಖಿಲ ಭಾರತ ದಲಿತ ವರ್ಗಗಳ ಮಹಿಳಾ ಸಮಾವೇಶದಲ್ಲಿ ಶೇಕಡಾ ೩೩ ಕ್ಕಿಂತ ಹೆಚ್ಚು ಅಂದರೆ,೭೫೦೦೦ ಪ್ರತಿನಿಧಿಗಳಲ್ಲಿ ೨೫೦೦೦ ಮಹಿಳೆಯರೇ ಭಾಗವಹಿಸಿರುವುದು ಚರಿತ್ರಾರ್ಹವಾಗಿದೆ.ಈ ಸಮಾವೇಶದಲ್ಲಿ "ಮಹಿಳಾ ಪ್ರಗತಿಯ ಬಗೆಗೆ ನನಗೆ ಅತಿಯಾದ ವಿಶ್ವಾಸವಿದೆ.ಮಹಿಳೆಯರಲ್ಲಿ ಜಾಗೃತಿ ಮೂಡಿಸುವುದಾದರೆ ಸಮಾಜದ ಸ್ಥಿತಿಗತಿಯನ್ನು ಬದಲಿಸಲು ಅವರು ನೆರವಾಗುತ್ತಾರೆಂದು ನನಗೆ ಗೊತ್ತು. ಸಾಮಾಜಿಕ ಪಾಪಗಳನ್ನು ನಿರ್ಮೂಲನೆಗೊಳಿಸುವಲ್ಲಿ ಮಹಿಳೆಯರ ಕೊಡುಗೆ ಮಹತ್ವದ್ದಾಗಿದೆ.. ಸಮುದಾಯವೊಂದರ ಪ್ರಗತಿಯನ್ನು ಅದರ ಮಹಿಳಾ ಪ್ರಗತಿಯಮೂಲಕ ನಾನು ಅಂದಾಜಿಸುತ್ತೇನೆ. . ನಾನು ಹೇಳುವ ಕೆಲವು ಅಂಶಗಳನ್ನು ನೀವು ಮನಸ್ಸಿನಲ್ಲಿಟ್ಟುಕೊಳ್ಳಬೇಕು, ಸ್ವಚ್ಛತೆಯನ್ನು ಕಲಿಯಿರಿ ಮತ್ತು ಎಲ್ಲ ಕೆಟ್ಟಗುಣಗಳಿಂದ ದೂರವಿರಿ.ನಿಮ್ಮ ಮಕ್ಕಳಿಗೆ ಶಿಕ್ಷಣ ನೀಡಿರಿ. ಅವರಲ್ಲಿ ಮಹತ್ವಾಕಾಂಕ್ಷೆಯನ್ನು ಮೂಡಿಸಿರಿ ಇದರಿಂದ ನೀವು ನಿಮ್ಮ ಮಕ್ಕಳಿಗೆ ಮಹತ್ವಾಕಾಂಕ್ಷಿಗಳಾಗುತ್ತಿರಿ ಎಂಬ ಭಾವನೆಯನ್ನು ಅವರ ಮನಸ್ಸಿನಲ್ಲಿ ಮೂಡಿಸಿರಿ, ಅವರ ಮನಸ್ಸಿನಿಂದ ಎಲ್ಲ ಬಗೆಯ ಕೀಳರಿಮೆಯನ್ನು ತೊಡೆದುಹಾಕಿರಿ.ವಿವಾಹವಾಗಲು ಆತುರರಾಗಬೇಡಿ, ವಿವಾಹವು ಬಲು ಖರ್ಚಿನ ಬಾಬ್ತು, ನಿಮ್ಮ ಮಕ್ಕಳ ಮೇಲೆ ಅದನ್ನು ನೀವು ಹೇರಬಾರದು.ಏಕೆಂದರೆ, ಮದುವೆಯ ಬಾಬ್ತುಗಳನ್ನು ಹಣಕಾಸು ದೃಷ್ಟಿಯಿಂದ ಎದುರಿಸಲು ಅವರು ಸಮರ್ಥರಾಗಬೇಕು.ವಿವಾಹವಾಗುವವರು ಹೆಚ್ಚು ಹೆಚ್ಚು ಮಕ್ಕಳನ್ನು ಹಡೆಯುವದು ಅಪರಾದ ಎಂಬುದನ್ನು ಮನಸ್ಸಿನಲ್ಲಿರಿಸಿಕೊಳ್ಳಬೇಕು.ತಮಗಿಂತ ಉತ್ತಮವಾದ ಜೀವನವನ್ನು ಪ್ರಾರಂಭಿಸುವಂತೆ ಮಕ್ಕಳನ್ನು ಬೆಳೆಸುವುದು ಎಲ್ಲ ತಂದೆ ತಾಯಿಗಳ ಆದ್ಯ ಕರ್ತವ್ಯವಾಗಿರುತ್ತದೆ.ಎಲ್ಲಕ್ಕಿಂತ ಮಿಗಿಲಾಗಿ ವಿವಾಹವಾಗುವ ಪ್ರತಿಮಹಿಳೆಯೂ ತನ್ನ ಗಂಡನ ಸ್ನೇಹಿತನಂತೆ ಸಮಾನ ಹಕ್ಕುಳ್ಳವಳಾಗಬೇಕೆಂದು ಮತ್ತು ಗುಲಾಮಳಾಗಲು ಧಿಕ್ಕರಿಸಬೇಕು"ಎಂದು ಡಾ.ಅಂಬೇಡ್ಕರರು ಹೇಳುತ್ತಾರೆ.

ಮಹಿಳಾ ಸಬಲೀಕರಣ ಕುರಿತು ಡಾ. ಅಂಬೇಡ್ಕರರು ಕೆಲವು ಆತ್ಯಾದುನಿಕ ಅಂಶಗಳನ್ನು ಸ್ಪಷ್ಟಪಡಿಸುತ್ತಾರೆ. ಅವುಗಳೆಂದರೆ **ಮೊದಲನೆಯದಾಗಿ** ಶಿಕ್ಷಣದ ಮೂಲಕವೇ ಮಹಿಳೆ ಮತ್ತು ಜನಾಂಗದ ಅಭಿವೃದ್ಧಿ ಸಾಧ್ಯ.**ಎರಡನೆಯದಾಗಿ ವಿ**ವಾಹವಾಗಲು ಆರ್ಥಿಕ ಸಾರ್ಮರ್ಥ್ಯ ಮತ್ತು ಸ್ವಾತಂತ್ರ್ಯವಿರಬೇಕು.ಈ ಸಾಮರ್ಥ್ಯವಿಲ್ಲದವರು ಸಮರ್ಥರಾಗುವವರೆಗೆ ವಿವಾಹವಾಗಬಾರದು.**ಮೊರನೆಯದಾಗಿ** ಪ್ರತಿ ವಿವಾಹಿತನು ತನ್ನ ಕುಟುಂಬದ ಪ್ರಮಾಣವನ್ನು ನಿಯಂತ್ರಿಸಬೇಕು.**ಕೊನೆಯದಾಗಿ** ಮಹಿಳೆ ಪುರುಷನ ದಾಸ್ಯತ್ವವನ್ನು ತೊರೆಯುವ ಮುಖಾಂತರವೇ ತನ್ನ ಸಬಲೀಕರಣಕ್ಕಾಗಿ ವಿಧಿ–ವಿಧಾನಗಳನ್ನು ರೂಪಿಸಬಹುದು.ಅಂದರೆ, ಮಹಿಳೆ ಕುಟುಂಬ ವ್ಯವಸ್ಥೆಯನ್ನು ಧಿಕ್ಕರಿಸಿ ಸಮಾನತೆಗಾಗಿ ಹೋರಾಡಬೇಕೆಂದಲ್ಲ, ಬದಲಿಗೆ ಮಹಿಳೆ ಕುಟುಂಬ ವ್ಯವಸ್ಥೆಯ ಚೌಕಟ್ಟಿನಲ್ಲೇ ಸಮಾನತೆ ಸಾಧಿಸಬೇಕೆಂದು ಅರ್ಥ.ಮಹಿಳಾ ಸಬಲೀಕರಣ ಕುರಿತು ಮೇಲಿನ ಅಂಶಗಳನ್ನು ಇಂದಿನ ಸಮಾಜವಿಜ್ಞಾನಿಗಳು ಪ್ರತಿಪಾದಿಸುತ್ತಿದ್ದಾರೆ.ಡಾ.ಅಂಬೇಡ್ಕರರ ಈ ಚಿಂತನೆಯು ಆಧುನಿಕ ಮತ್ತು ವೈಜ್ಞಾನಿಕವಾಗಿದ್ದನ್ನು ಸ್ಪಷ್ಟಪಡಿಸುತ್ತದೆ.

ಮಹಿಳಾ ಸಬಲೀಕರಣಕ್ಕಾಗಿ ಹೋರಾಟವನ್ನೇ ಪ್ರಾರಂಬಿಸಿದ ಡಾ.ಅಂಬೇಡ್ಕರರು ಏಪ್ರಿಲ್ ೧೧, ೧೯೪೭ ರಂದು ಹಿಂದೂಕೋಡ್ ಬಿಲ್‌ನ್ನು ಸದನದಲ್ಲಿ ಮಂಡಿಸಿದರು. ಹಿಂದೂ ಕೋಡ್‌ಬಿಲ್ ಭಾರತದ ಇತಿಹಾಸದಲ್ಲಿ ಮಹಿಳೆಯರ ಪಾಲಿಗೆ ವರದಾನವಾಗಿದೆ. ಡಾ. ಅಂಬೇಡ್ಕರರು ಸ್ತ್ರೀಯರಿಗಾಗಿ ಮಾಡಿದ ಹೋರಾಟಗಳನ್ನು ಮತ್ತು ನೀಡಿದ ಕೊಡುಗೆಗಳನ್ನು ತಿರಸ್ಕರಿಸಿದ 'ಹಿಂದೂಕೋಡ್ ಬಿಲ್' ಈಗ ಭಾರತದ ಸಂವಿದಾನದಲ್ಲಿ ನೋಡುಬಹುದಾಗಿದೆ.ಇತ್ತೀಚಿನವರೆಗೆ ಸಾಮಾನ್ಯ ಕೋಡ್ ಇರಲಿಲ್ಲ. ಹಿಂದೂ ಮಹಿಳೆಯರನ್ನು ಒಂದೇ ಕಾನೂನಿನ ಅಡಿಯಲ್ಲಿ ತರುವ ಪ್ರಯತ್ನ ಡಾ.ಅಂಬೇಡ್ಕರರದಾಗಿತ್ತು.

ಈ ಕೆಳಕಂಡ ಏಳು ವಿವಿಧ ವಿಷಯಗಳಿಗೆ ತಿದ್ದುಪಡಿ ಮಾಡುವ ಧ್ಯೇಯ ಅಂಬೇಡ್ಕರರಿಗಿತ್ತು.**ಮೊದಲನೆಯದಾಗಿ** ಆಸ್ತಿ ಹಕ್ಕಿನ ತಿದ್ದುಪಡಿ (ಒಂದು ವೇಳೆ ಹಿಂದೂ ಮೃತ ವ್ಯಕ್ತಿ ತನ್ನ ಆಸ್ತಿ ಕುರಿತಂತೆ ಮೃತ್ಯುಪತ್ರವನ್ನು ಮಾಡದೇ ಮರಣ

ಹೊಂದಿದ್ದರೆ), **ಎರಡನೆಯದಾಗಿ** ಆಸ್ತಿಯ ಉತ್ತರಾಧಿಕಾರತ್ವವನ್ನು ನಿರ್ಧರಿಸದೇ ಸತ್ತಿದ್ದರೆ, **ಮೂರನೆಯದಾಗಿ** ಜೀವನಾಂಶ ಕಾನೂನು, **ನಾಲ್ಕನೇಯದಾಗಿ** ಮದುವೆ, **ಐದನೇಯದಾಗಿ** ವಿವಾಹ ವಿಚ್ಛೇಧನ, **ಆರನೆಯದಾಗಿ** ದತ್ತು ತೆಗೆದುಕೊಳ್ಳುವ ಅಧಿಕಾರ, **ಏಳನೆಯದಾಗಿ** ಅಪ್ರಾಪ್ತ ವಯಸ್ಕ ಮತ್ತು ಗಾರ್ಡಿಯನ್ಸ್‌ಶಿಪ್ ಕುರಿತಂತೆ ಡಾ.ಅಂಬೇಡ್ಕರರರು ಮಂಡಿಸಿದ ಹಿಂದೂಕೋಡ್ ಬಿಲ್ ಹಳೆ ಮತ್ತು ಹೊಸ ಸಂಪ್ರದಾಯಗಳ ನಡುವಿನ ಒಪ್ಪಂದವಾಗಿತ್ತು.

ಈ ಮಸೂದೆಯ ಪ್ರಕಾರ ಹಿಂದೂ ಒಬ್ಬ ಹೊಸ ಇಲ್ಲವೇ ಹಳೆಯ ಕಾನೂನುಗಳನ್ನು ಪಾಲಿಸಬೇಕಾಗಿತ್ತು.ಅವನು ಇಂಥದ್ದನ್ನೇ ಪಾಲಿಸಬೇಕೆಂಬ ನಿರ್ಬಂದವಿರಲಿಲ್ಲ. ಸಂಪ್ರದಾಯಸ್ಥ ಹಿಂದೂಗಳ ಪ್ರಕಾರ ವಧುವರರು ಒಂದೇ ವರ್ಣ, ಮತ್ತು ಜಾತಿಗೆ ಸೇರಬೇಕಿತ್ತು.ಅಂತಹ ಮದುವೆಗೆ ಕಾನೂನಿನ ಸಮ್ಮತಿಯಿತ್ತು.ಅದೇ ವೇಳೆ ಒಬ್ಬ ಸುಧಾರಣಾವಾದಿ ಹಿಂದೂ ವರ್ಣ, ಜಾತಿ, ಮತಪಂಥಗಳಲ್ಲಿ ನಂಬುಗೆಯಿಡದೇ ತಮ್ಮದಲ್ಲದ ಬೇರೆ ವರ್ಣ, ಜಾತಿ ಉಪಜಾತಿಯ ವಧು ವಿವಾಹವಾಗುವದಾದರೆ, ಅದಕ್ಕೂ ಈ ಹೊಸ ಹಿಂದೂಕೋಡ್ ಬಿಲ್ ಪ್ರಕಾರ ಕಾನೂನಿನ ಸಮ್ಮತಿಯಿತ್ತು. ಹೀಗೆ ಎರಡು ಸಮನಾಂತರ ವಿವಾಹದ ಕಾನೂನುಗಳನ್ನು ತರುವದು ಅಷ್ಟೇನು ಕ್ರಾಂತಿಕಾರಕ ವಿಷಯವೂ ಅಲ್ಲ. ಈ ನಿಟ್ಟಿನಲ್ಲಿ ಶಾಸ್ತ್ರ ಮತ್ತು ಸ್ಮೃತಿಗಳ ಉಲ್ಲಂಘನೆಯೂ ಆಗಿಲ್ಲವೆಂದು ಡಾ. ಅಂಬೇಡ್ಕರ್ ತಮ್ಮ ಟೀಕಾಕಾರರಿಗೆ ಉತ್ತರಿಸಿದರು.ಸ್ಮೃತಿಗಳಲ್ಲಿ ಮತ್ತು ಮಹಾಭಾರತದಲ್ಲಿ ಉಚ್ಚಜಾತಿಯ ಗಂಡಸು ಮತ್ತು ಕಡಳಜಾತಿಯ ಸ್ತ್ರೀಯ ನಡುವೆ (ಅನುಲೋಮ) ನಡೆದ ವಿವಾಹದ ಉಲ್ಲೇಖಗಳನ್ನು ಡಾ.ಬಾಬಾಸಾಹೇಬರು ಎತ್ತಿತೋರಿಸಿದರಲ್ಲದೇ, ಮೇಲ್ಜಾತಿಯ ಸ್ತ್ರೀ ಮತ್ತು ಕೆಳಜಾತಿಯ ಗಂಡಸರ ನಡುವೆ ಪ್ರತಿಲೋಮ ಪದ್ಧತಿಯನ್ನು ಎತ್ತಿತೋರಿಸಿದರು.

ದತ್ತು ತೆಗೆದುಕೊಳ್ಳುವ ವಿಷಯದಲ್ಲಿ ಹಿಂದೂಕೋಡ್ ಬಿಲ್ ಜಾತಿ ತಾರತಮ್ಯವನ್ನು ತೊಡೆದುಹಾಕಿತ್ತು. ದತ್ತುಪುತ್ರನ ತಂದೆ ತೀರಿಹೋದಾಗ, ತಾಯಿ ಅನಾಥಳಾಗುವ ಭಯ ಅಂಬೇಡ್ಕರರಿಗಿದೆ. ಮಕ್ಕಳಿಲ್ಲದೇ ಗಂಡ ಸತ್ತ ಮೇಲೆ ಸಾಮಾನ್ಯವಾಗಿ ಹೆಂಡತಿ ವಾರಸುದಾರಳಾಗಬೇಕು.ಆದರೆ ವ್ಯತಿರಿಕ್ತವಾಗಿ ಆ ಮಹಿಳೆ ಬದುಕಲು ದತ್ತುಪುತ್ರರ ಮೇಲೆ ಯಾಕೆ ಅವಲಂಬಿತಳಾಗಬೇಕು?ಎಂಬುದು ಅಂಬೇಡ್ಕರರ ಪ್ರಶ್ನೆಯಾಗಿತ್ತು. ಹೀಗಾಗಿ ದತ್ತುಪುತ್ರನ ಆಸ್ತಿ ಹಕ್ಕಿನಿಂದ ಆ ತಾಯಿ ವಂಚಿತಳಾಗಬಾರದೆಂದು ಬಯಸಿದ್ದ ಅಂಬೇಡ್ಕರ್ ದತ್ತುಪುತ್ರನನ್ನು ಪಡೆಯಲು ಹೆಂಡತಿಯ ಸಮ್ಮತಿ ಪಡೆಯುವ ಅವಶ್ಯಕತೆಯನ್ನು ಪ್ರತಿಪಾದಿಸಿದರಷ್ಟೇ ಅಲ್ಲ, ದತ್ತುಪುತ್ರನ ಬದಲಾಗಿ ದತ್ತುಪುತ್ರಿಯನ್ನು ಪಡೆಯುವ ಅವಕಾಶವನ್ನು ಈ ಹೊಸ ಕರಡಿನಲ್ಲಿ ಸೇರಿಸಿದ್ದರು.

ಹಿಂದೂಕೋಡ್ ಬಿಲ್‌ನಲ್ಲಿ ಮೊದಲು ಆಸ್ತಿಯ ಹಕ್ಕಿನ ತಿದ್ದುಪಡಿ ಮಾಡಲಾಗಿತ್ತು.ಒಂದು **'ಮಿತಾಕ್ಷರ'** ಇನ್ನೊಂದು **'ದಯಾಭಾಗ'** ಮಿತಾಕ್ಷರದ ಪ್ರಕಾರ ಸಂಪತ್ತು ಏಕವ್ಯಕ್ತಿಯ ಸ್ವತ್ತಾಗಿರಲಿಲ್ಲ. ಅದು ಎಲ್ಲರಿಗೂ ಸೇರಬೇಕಾಗಿರುವ ಸಹಭಾಗಿತ್ವ ಸಂಪತ್ತಾಗಿತ್ತು.ಇದರ ಜೊತೆ ಮಗಳಿಗೆ ತಂದೆಯ ಆಸ್ತಿಯಲ್ಲಿ ಮಗನಂತೆಯೇ ಭಾಗವನ್ನು ಕೊಡಬೇಕಾಗಿತ್ತು.ಎರಡನೇ ಬದಲಾವಣೆಯಲ್ಲಿ ನಾವು ಮಿತಾಕ್ಷರ ಮತ್ತು ದಯಾಭಾಗದಲ್ಲಿ ಇರುವ ಸ್ತ್ರೀ ಉತ್ತರಾಧಿಕಾರಿಗಳ ಸಂಖ್ಯೆಗಿಂತ ಹಿಂದೂಕೋಡ್ ಬಿಲ್‌ನಲ್ಲಿ ಸ್ತ್ರೀ ಉತ್ತರಾಧಿಕಾರಿಗಳ ಸಂಖ್ಯೆಯು ಹೆಚ್ಚಿರುವದನ್ನು ಕಾಣುತ್ತೇವೆ. ಮೂರನೇ ಬದಲಾವಣೆಯಲ್ಲಿ ಮಿತಾಕ್ಷರ ಮತ್ತು ದಯಾಭಾಗದಲ್ಲಿ ಮೃತವ್ಯಕ್ತಿಯ ಸ್ತ್ರೀ ಉತ್ತರಾಧಿಕಾರಿಗಳ ಮಧ್ಯೆ ಬಡವಳು, ಶ್ರೀಮಂತಳು, ವಿವಾಹಿತಳು.ಅವಿವಾಹಿತಳು, ಮಕ್ಕಳಿದ್ದವಳು, ಇಲ್ಲದವಳು, ಮನೆಯಲ್ಲಿದ್ದವಳು, ಮನೆ ಬಿಟ್ಟು ಹೋದವಳು ಎಂಬ ಭೇದಭಾವ ಇರುವದನ್ನು ಈ ಹಿಂದೂ ಕೋಡ್ ಬಿಲ್ ತೊಡೆದುಹಾಕಿತ್ತು.ಕೊನೆಯ ಬದಲಾವಣೆ ದಯಾಭಾಗದಲ್ಲಿ ಆಗಿತ್ತು.ದಯಾಭಾಗದಲ್ಲಿ ತಾಯಿಯ ಆದ್ಯತೆಗಿಂತ ಪೂರ್ವ ತಂದೆಯು ಉತ್ತರಾದಿಕಾರಿಯ ಪದವಿ ಹೊಂದಿರುತ್ತಿದ್ದ.ಈ ಬಿಲ್ ಪ್ರಕಾರ ತಾಯಿಯು ತಂದೆಗಿಂತ ಮೊದಲು ಬರುತ್ತಿದ್ದಳು.

ಇದು ಪುರುಷ ಮೃತ ವ್ಯಕ್ತಿಯ ಉತ್ತರಾಧಿಕಾರತ್ವದ ಬಗ್ಗೆ ಇರುವ ವಿಷಯ. ಮೊದಲನೇ ಬದಲಾವಣೆ ಅನೇಕ ಭಾಗದಲ್ಲಿ ಹಂಚಿ ಹೋಗಿದ್ದ ಸ್ತ್ರೀಧನವನ್ನು ಒಂದೇ ಭಾಗ ಮಾಡಿ ಉತ್ತರಾಧಿಕಾರಿಗಳಿಗೆ ಒಂದೇ ನಿಯಮ ಅನ್ವಯಿಸುವಂತೆ ಮಾಡಲಾಗಿತ್ತು ಎರಡನೇಯದಾಗಿ ಮಗನಿಗೂ ಮಗಳಂತೆ, ಅದರಲ್ಲಿ ಪಾಲು ಸಿಗುವಂತೆ ಮಾಡಲಾಗಿತ್ತು. ಮಗಳು ತಂದೆಯ ಆಸ್ತಿಯಲ್ಲಿ ಅರ್ಧದಷ್ಟು ಪಾಲನ್ನು ಹೊಂದಿದರೆ, ಮಗನು ತಾಯಿಯ ಆಸ್ತಿಯಲ್ಲಿ ಅರ್ಧ ಪಾಲನ್ನು ಪಡೆಯುವದರ ಮೂಲಕ ಅಲ್ಲಿ ಈ ಬಿಲ್ ಮಗ ಮತ್ತು ಮಗಳಿಗೆ ಆಸ್ತಿಯಲ್ಲಿ ಸಮಾನತೆ ಒದಗಿಸುತ್ತದೆ.

'ಮಹಿಳೆಯರ ಸ್ಥಿರಾಸ್ತಿ'ಯ ಬಗ್ಗೆ ನೊಡಲಾಗಿ ಹಿಂದೂ ಕಾನೂನಿನ ಪ್ರಕಾರ ಆಸ್ತಿಯನ್ನು 'ಜೀವನಾಂಶ' ಎಂದು ಪರಿಗಣಿಸಲಾಗಿತ್ತು.ಈ ವಿಷಯದ ಕುರಿತು.ಡಾ. ಅಂಬೇಡ್ಕರರು ತಮ್ಮ ಬಿಲ್ಲನಲ್ಲಿ ಎರಡು ಬದಲಾವಣೆಗಳನ್ನು ಮಾಡಿದರು.ಮೊದಲನೆಯದಾಗಿ ಗಂಡನು ಹೇಗೆ ತನ್ನ ಪೂರ್ವಜರಿಂದ ಪಡೆದಂತಹ ಆಸ್ತಿಯಲ್ಲಿ ಬಂಧನಗಳನ್ನು ಹೊಂದಿರುವದಿಲ್ಲವೋ ಅದೇ ಮಹಿಳೆಗೆ ದೊರೆತ ಸ್ಥಿರಾಸ್ತಿಯನ್ನು ಚರಾಸ್ತಿಯನ್ನಾಗಿಸಿ ಅದರ ಮೇಲೆ ಅವಳು ಸಂಪೂರ್ಣವಾಗಿ ಅಧಿಕಾರ ಹೊಂದುವದಾಗಿತ್ತು.ಮತ್ತೊಂದು ವಿಧವೆಯ ಆಸ್ತಿಯ ಪೂರ್ವಸ್ಥಿತಿಗೆ ಮರಳಿಸುವದನ್ನು ರದ್ದುಗೊಳಿಸಲಾಗಿತ್ತು.

ಹಿಂದೂ ಕಾನೂನಿನ ಪ್ರಕಾರ ಮಹಿಳೆಯು ಗಂಡನಿಂದ ಬೇರ್ಪಟ್ಟು ಜೀವಿಸುತ್ತಿದ್ದರೆ, ಅವಳು ಜೀವನಾಂಶ ಕೇಳಕೂಡದು ಮತ್ತು ಅವಳಗಾಗಿ ಜೀವನಾಂಶವನ್ನು ಕೊಡಬಾರದು ಎಂಬುದನ್ನು ಪ್ರತಿಪಾದಿಸುತ್ತಿತ್ತು.ಆದರೆ ಅಂಬೇಡ್ಕರರು ಮಂಡಿಸಿದ ಹಿಂದೂಕೋಡ್ ಬಿಲ್‌ನಲ್ಲಿ ಮಹಿಳೆಯು ಜೀವನಾಂಶವನ್ನು ಕೇಳುವ ಹಕ್ಕನ್ನು ನಮೂದಿಸಲಾಗಿದೆ.ಈ ಹಿಂದೂ ಕೋಡ್ ಬಿಲ್ಲಿನ ಪ್ರಕಾರ ಪ್ರಮುಖ ಕಾರಣಗಳಂದಾಗಿ ಮಹಿಳೆಯು ತನ್ನ ಗಂಡನಿಂದ ಜೀವನಾಂಶವನ್ನು ಕೇಳುವ ಹಕ್ಕನ್ನು ಹೊಂದಿದ್ದಾಳೆ.

ಎಪ್ರಿಲ್ ೧೧, ೧೯೪೭ ರಿಂದ ೧೯೫೧ ರವರೆಗೆ ಅಂದರೆ ನಾಲ್ಕು ವರ್ಷಗಳ ಕಾಲದವರೆಗೆ ಸುಧೀರ್ಘವಾಗಿ ಈ ಬಿಲ್ಲಿನ ಬಗ್ಗೆ ಸುಧೀರ್ಘ ಚರ್ಚೆ ನಡೆಯಿತು.ಕೊನೆಗೆ ನೆಹರೂ ಅವರು ಕೇವಲ ಸಮಯ ಅಭಾವದ ನೆಪವೊಡ್ಡಿ, ಈಗ ಇರುವ ಕಾಲಾವಧಿಯಲ್ಲಿ ಇಡೀ ಮಸೂದೆ ಬಗ್ಗೆ ಚರ್ಚೆ ಅಸಾದ್ಯವಾಗಿದ್ದು, ಮಸೂದೆಯು ವ್ಯರ್ಥವಾಗುವ ಸಾದ್ಯತೆಯಿದೆ.ಆದಕಾರಣ ಮಸೂದೆಯ ಒಂದು ಭಾಗವನ್ನು ಮಾತ್ರ ಚರ್ಚೆಗೆ ತಂದು ಅದನ್ನು ಮಾತ್ರ ಕಾಯ್ದೆ ಮಾಡುವದು ಒಳಿತು ಎಂಬುದು ಪ್ರಧಾನಿಯ ಸಲಹೆಯಾಗಿತ್ತು.ಇದನ್ನು ಕೇಳಿ ದಂಗಾಗಿ ಹೋದ ಡಾ.ಅಂಬೇಡ್ಕರರು "ಎಲ್ಲವೂ ಕಳೆದು ಹೋಗುವ ಸಂಭವವಿದ್ದಾಗ ಅಲ್ಪವನ್ನಾದರೂ ಉಳಿಸಿಕೊಳ್ಳುವದು ಒಳಿತು" ಎಂದು ಆ ಸಲಹೆಗೆ ಒಪ್ಪಿಕೊಂಡರು.ಆದರೆ ದುರದೈವಶಾತವೆನೆಂದರೆ ಭಾರತ ದೇಶದ ಯಾವ ಮಹಿಳೆಯರೂ ಈ ಮಸೂದೆಗೆ ಸಾತ್ ನೀಡದಿರುವುದು ವಿಷಾದನೀಯವಾಗಿದೆ.ಇದರಿಂದಾಗಿ ಹೇಗೊ ನಾಲ್ಕು ವರ್ಷಗಳವರೆಗೆ ಉಸಿರಾಡಿದ ಮಸೂದೆಯನ್ನು ನಿಷ್ಕರುಣೆಯಿಂದ ಕೊಲ್ಲಲಾಯಿತು.'ಈ ಮಸೂದೆಯ ಸಾವಿಗೆ ಅಳುವವರೂ ಇರಲಿಲ್ಲ. ಹಾಡುವವರೂ ಇರಲಿಲ್ಲ' ಇಂತಹ ಸಮಗ್ರವಾದ ಮಹಿಳಾಹಕ್ಕುಗಳನ್ನು ಹೊಂದಿದ ಈ ಮಸೂದೆ ಸ್ವೀಕೃತವಾಗದೇ ಇರುವುದು ಮಹಿಳಾ ಜನಾಂಗಕ್ಕೆ ಕೊಡಲಿಪೆಟ್ಟುಬಿದ್ದಂತಾಯಿತು.ಇದರಿಂದಾಗಿ ಡಾ.ಅಂಬೇಡ್ಕರರು ಮಹಿಳಾ ಸಬಲೀಕರಣದ ಸಲುವಾಗಿ ಕಾನೂನು ಮಂತ್ರಿಯ ಪದವಿಗೆ ರಾಜಿನಾಮೆ ನೀಡಿದರು. ಭಾರತದ ಚಾರಿತ್ರಿಕ ಇತಿಹಾಸದಲ್ಲಿಯೇ ಮಹಿಳೆಯರ ಸಬಲೀಕರಣಕ್ಕಾಗಿ ಉನ್ನತ ಸ್ಥಾನಗಳನ್ನು ಬಿಟ್ಟಿರುವುದು ಇತಿಹಾಸದಲ್ಲೇ ಇನ್ನೊಬ್ಬರು ಕಾಣಿಸುವುದಿಲ್ಲ.ಭಾರತ ದೇಶದ ಮಹಿಳೆಯರು ಎಲ್ಲ ರಂಗಗಳಲ್ಲಿ ಭಾಗವಹಿಸಿರಬೆಕಾದರೆ ಅದಕ್ಕೆಬಾಬಾಸಾಹೇಬರೇ ಕಾರಣೀಭೂತರು. ಆದ್ದರಿಂದ ಪ್ರತಿಯೊಬ್ಬ ಭಾರತದ ಮಹಿಳೆಯರೂ ಬಾಬಾಸಾಹೇಬರಿಗೆ ಚಿರಋಣಿಯಾಗಿರಬೇಕು.

ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ ಅವರು ಭಾರತದ ಸಂವಿಧಾನ ರಚಿಸುವಾಗ ಮೂಲಭೂತ ಹಕ್ಕುಗಳಲ್ಲಿ ಮಹಿಳೆಯರ ಕಲ್ಯಾಣವನ್ನು ಗಮನದಲ್ಲಿಟ್ಟುಕೊಂಡು ಸಂವಿಧಾನಾತ್ಮಕ ಹಕ್ಕುಗಳು ಮತ್ತು ರಕ್ಷಣೋಪಾಯಗಳನ್ನು ಸಂವಿಧಾನದಲ್ಲಿ ಅಳವಡಿಸಿದ್ದಾರೆ. ಅವುಗಳಲ್ಲಿ ಮುಖ್ಯವಾದ ಕೆಲವನ್ನು ಈ ಕೆಳಗೆ ಹೇಳಲಾಗಿದೆ.

ಸಂಧಾನಾತ್ಮಕ ಹಕ್ಕುಗಳು : ಸಮಾನತೆಯ ಹಕ್ಕು, ಸ್ವಾತಂತ್ರ್ಯದ ಹಕ್ಕು, ಶೋಷಣೆಯ ವಿರುದ್ಧ ಹಕ್ಕು,

ಧಾರ್ಮಿಕ ಸ್ವಾತಂತ್ರ್ಯದ ಹಕ್ಕು, ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಹಕ್ಕು.

ರಕ್ಷಣಾತ್ಮಕ ಹಕ್ಕುಗಳು :

ಕಲಮ್–೧೪ : ಭಾರತದ ಪ್ರಜೆಗಳೆಲ್ಲರೂ ಸಮಾನರು; ಎಲ್ಲ ಪ್ರಜೆಗಳಿಗೆ ಕಾನೂನಿನ ಪ್ರಕಾರ ಸಮಾನ ರಕ್ಷಣಾ ಬದ್ರತೆಯನ್ನು ನೀಡಲಾಗಿದೆ

ಕಲಮ್–೧೫ : ಧರ್ಮ,ವಂಶ, ಜಾತಿ, ಲಿಂಗ, ಜನ್ಮಸ್ಥಳದ ಆಧಾರಿತ ತಾರತಮ್ಯದ

ನೀಷೇಧ.

ಕಲಮ್–೧೫(೩) : ಕುಟುಂಬದಿಂದ ಮತ್ತು ಪುರುಷರಿಂದ ಮಹಿಳೆಯರಿಗೆ ಮಾನಸಿಕ ಹಿಂಸೆ ಮತ್ತು ಹೊಡೆಯುವದರಿಂದ ರಕ್ಷಿಸುವುದು.

ಕಲಮ್–೧೬ : ಸರಕಾರಿ ನೌಕರಿಯಲ್ಲಿ ಮಹಿಳೆಯರಿಗೆ ಹಾಗೂ ಪುರುಷರಿಗೆ ಸಮಾನ ಅವಕಾಶವನ್ನು ನೀಡುತ್ತದೆ ಅಂದರೆ ಸರಕಾರಿ ಕಚೇರಿಗಳಲ್ಲಿ ನೌಕರಿಯನ್ನು ಕೊಡುವಾಗ ಅಥವಾ ನೇಮಕಾತಿ ಮಾಡುವಾಗ ಧರ್ಮ, ಬುಡಕಟ್ಟು, ಜಾತಿ, ಲಿಂಗ, ಜನ್ಮಸ್ಥಳ ಇವುಗಳಿಗೆ ಯಾವುದೇ ಬೇಧಭಾವವನ್ನು ತೋರಿಸಬಾರದು.

ಕಲಮ್–೩೯ : ಮಹಿಳೆಯರಿಗೂ ಪುರುಷರಿಗೂ ಜೀವನಾವಶ್ಯಕ ಮತ್ತು ಸಮಾನ ಉದ್ಯೋಗಕ್ಕೆ

ಸಮಾನ ವೇತನವನ್ನು ಒದಗಿಸುವದು.

ಇತರ ಕಾಯ್ದೆಗಳಾದ ಸತಿಪದ್ದತಿ ನಿರ್ಮೂಲನೆ, ವರದಕ್ಷಿಣಿ ನಿಷೇದ ಕಾಯ್ದೆ, ಮಹಿಳೆಯ ಅಶ್ಲೀಲತೆಯನ್ನು ಪ್ರದರ್ಶಿಸುವುದನ್ನು ಸಡೆಗಟ್ಟುವ ಕಾಯ್ದೆ, ಇವುಗಳಲ್ಲದೇ ಮಹಿಳೆಯ ಮೇಲಾಗುವ ಅಪರಾಧಗಳಾಗುದ ಅತ್ಯಾಚಾರ, ಲೈಂಗಿಕ ಕಿರುಕಳ, ಅಪಹರಣ, ಹುಡುಗಿಯರ ಮಾರಾಟವನ್ನು ತಡೆಗಟ್ಟುವ ಕಾಯ್ದೆಗಳನ್ನು ಡಾ.ಅಂಬೇಡ್ಕರರು ಸಂವಿಧಾನದಲ್ಲಿ ಅಳವಡಿಸಿದ್ದಾರೆ.

ಒಟ್ಟಾರೆ ಈ ಪ್ರಬಂಧದಲ್ಲಿ ಭಾರತದ ಮಹಿಳೆಯು ಸಾವಿರಾರು ವರ್ಷಗಳಿಂದ ಅನೇಕ ರೀತಿಯಲ್ಲಿ ಶೋಷಣೆ,ನೋವು, ಕಷ್ಟ, ಅತ್ಯಾಚಾರ, ಲೈಂಗಿಕ ದೌರ್ಜನ್ಯ, ಹಿಂಸೆ ಮುಂತಾದ ಹಿಂಸಾತ್ಮಕ ಶೋಷಣೆಗೆ ಗುರಿಯಾಗುತ್ತಿದ್ದಾಳೆ.ಇಂತಹ ಮಹಿಳೆಯರ ಮೇಲಿನ ಶೋಷಣೆಗಳನ್ನು ತಡೆಗಟ್ಟುಲು ಡಾ.ಬಾಬಾಸಾಹೇಬ ಅಂಬೇಡ್ಕರರು 'ಹಿಂದೂ ಕೋಡ್ ಬಿಲ್' ನಲ್ಲಿ ಮಹಿಳೆಯರ ವಿಮೋಚನೆಗೆ ಪರಿಹಾರಗಳನ್ನು ಸೂಚಿಸಿದರು. ಪುರುಷ ಸಮಾಜವು ಮಹಿಳೆಯ ಮಹತ್ವ ಅರಿತುಕೊಳ್ಳಬೇಕಿದೆ. ಈ ದಿಸೇಯಲ್ಲಿ ಪುರುಷರು ಮಹಿಳೆಯ ಬಗೆಗಿನ ದೃಷ್ಟಿಕೋನ ಬದಲಿಸಿಕೊಂಡರೆ,ಮಹಿಳೆ ಶೋಷಣೆಯಿಂದ ಮುಕ್ತವಾಗಿ ವಿಮೋಚನೆ ಹೊಂದಬಹುದಾಗಿದೆ. ಇದಕ್ಕಿಂತ ಮಿಗಿಲಾಗಿ ಡಾ.ಬಾಬಾಸಾಹೇಬರು "ಹಿಂದೂ ಕೋಡ್ ಬಿಲ್ ನಲ್ಲಿ ಮಹಿಳಾ ಮಿಸಲಾತಿಗೆ ಹೆಚ್ಚಿನ ಆದ್ಯತೆ ನೀಡಿದರು.ಮಹಿಳೆಯರ ಕಲ್ಯಾಣಕ್ಕಾಗಿ ಕಾನೂನುಗಳನ್ನು ತಯಾರಿಸಿದ ಮೊದಲ ವ್ಯಕ್ತಿ ಡಾ.ಬಾಬಾಸಾಹೇಬ ಅಂಬೇಡ್ಕರರು ಎಂದರೆ ತಪ್ಪಾಗಲಾರದು.ಇವತ್ತಿನ ಮಹಿಳೆಯು ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕಿಯವಾಗಿ ಸಮಾನತೆ ಹೊಂದಿ, ಎಲ್ಲ ಕ್ಷೇತ್ತಗಳಲ್ಲಿಯೂ ಮೇಲುಗೈ ಸಾಧಿಸಲು ಮೂಲ ಕಾರಣ ಡಾ.ಬಾಬಾಸಾಹೇಬ ಅಂಬೇಡ್ಕರ ಎಂಬುದು ಅನೇಕ ಮಹಿಳೆಯರಿಗೆ ತಿಳಯದಿರುವುದು ಅತ್ಯಂತ ಖೇದಕರ ಸಂಗತಿಯಾಗಿದೆ.ಹೀಗಾಗಿ ಡಾ.ಬಾಬಾಸಾಹೇಬ ಅಂಬೇಡ್ಕರರು ಅಂದು ಸಂಸತ್ತಿನಲ್ಲಿ ಮಂಡಿಸಿದ 'ಹಿಂದೂ ಕೋಡ್ ಬಿಲ್' ಸುದೀರ್ಘ ಚರ್ಚೆಯ ನಡುವೆ ಬಿಲ್‌ನ್ನು ಸಂಪೂರ್ಣವಾಗಿ ಪಾಸು ಮಾಡದಿದ್ದರೂ ಕೂಡಾ ಪ್ರಸ್ತುತ ಭಾರತದಲ್ಲಿನ ಸರ್ಕಾರಗಳು 'ಹಿಂದೂ ಕೋಡ್ ಬಿಲ್' ದಲ್ಲಿನ ಅಂಶಗಳುನ್ನು ಇತ್ತೀಚಿಗೆ ಜಾರಿಯಾಗುತ್ತಿರುವುದು ಡಾ.ಬಾಬಾಸಾಹೇಬ ಅಂಬೇಡ್ಕರರ ಪ್ರರಿಶ್ರಮದ ಫಲವಾಗಿ ಎಂಬುದನ್ನು ಮಹಿಳೆಯರು ಅರಿಯಬೇಕಾಗಿದೆ.ಈ ಎಲ್ಲ ಅಂಶಗಳನ್ನು ಅವಲೋಖನ ಮಾಡಿದಾಗ ಹಿಂದೂ ಕೋಡ್ ಬಿಲ್‌ದಲ್ಲಿನ ವಿಷಯಗಳು ಸಮಕಾಲಿನ ಭಾರತದಲ್ಲಿಯೂ ಕೂಡಾ ಪ್ರಸ್ತುತವಾಗಿದೆ.ಈ ಹಿನ್ನೆಲೆಯಲ್ಲಿ ಮಹಿಳಾ ಜನಾಂಗವು ಡಾ. ಬಾಬಾಸಾಹೇಬ ಅಂಬೇಡ್ಕರರ ಹೆಸರನ್ನು ಇತಿಹಾಸದ ಪುಟಗಳಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡುವುದು ಚಿರಸ್ಮರಣೀಯ.

ಖಇಈಇಖಇಓಅಇಖ

ಪ್ರೊ. ಶಿವರುದ್ರ ಕಲ್ಲೋಳಿಕರ ಮತ್ತು ಪ್ರೋ. ವೈ.ಬಿ.ಹಿಮ್ಮಡಿ(೨೦೦೨) (ಸಂ)–ಸ್ವಾಭಿಮಾನ ಶಿಲ್ಪಿ ಬಿ.ಬಸಲಿಂಗಪ್ಪನವರ ಮೂರ್ತಿ ಪ್ರತಿಷ್ಠಾನಸಮಿತಿ ಹುಬ್ಬಳಿ–ಧಾರವಾಡ ಮಹಾನಗರ ಪಾಲಿಕೆ, ಹುಬ್ಬಳಿ.
ಪ್ರೊ.ಮಾನೆ ಆ.(೨೦೦೭)ಬಾಬಾಸಾಹೇಬ ಅಂಬೇಡ್ಕರ್ ಮತ್ತು ದಲಿತ–ಚಳುವಳಿ, ಡಾ.ಬಿ.ಆರ್.ಅಂಬೇಡ್ಕರ್ ರೀಸರ್ಚ

ಅಕಾಡೆಮಿ. ಮೈಸೂರು

ಂಟ್ಟಾಜ್ಞಾಚಿಡಿ,ಃ. (೧೯೯೫).ಫಡಿಾಟ್ಟಾ೦ ಚಿಟಜ ಖಿಜ್ಞಾಖ್ಯಾ೧೪(೧) ಇಜಣ್ಣಾಚಿಣಾಟ್ಟಾ ಆಜ್ಞಿಚಿಡಿಣಟ್ಟಾಣ, ಉಡ್ಡಾ ಡ್ಡಾ ಒಚ್ಚುಚಿಡಿಚ್ಚಿಣಡಿಚಿ

ಆ್ಯಚಿತ್ಯಾಚಿಟಣ್ಣಾತಿಚಿಡಿ ಅ ೧ ಚಿಟಜ ಃಚಿಟಚಿಡ್ಡಾಜ, ಅ.ಅ. (೨೦೧೭), ಆಡಿ. ಃ ಖ ಂಟ್ಟಾಜ್ಞಾಚಿಡಿ ಚಿ ಚಿ ಖ್ಯಾಟ್ಟಾಚಿಟ ಫಡಿಾಜ್ಞಾಡಿ ಜಿಡಿಣ್ಣಾಜ ಒಚಿಡಿಟ್ಟಾಚಿಟ್ಟಾಜ್ಞಾಖ್ಯಾಣಾಟ್ಟಾ, *ಖಟಣಜ್ಞಾಡಿಟಚಿಣಾಟ್ಟಾಚಿಟ ಖಜ್ಞಾಚಿಡಿಟ್ಟಾ ಎಡ್ಡಾಡಿಟಚಿಟ ಡ್ಡಾ ಊಣಾಟ್ಟಾಚಿಟ ಖಜ್ಞಾಡಿಟ್ಟಾಜ ಚಿಟಜ ಖ್ಯಾಟ್ಟಾಚಿಟ ಖ್ಯಾಟ್ಟಾಟ್ಟಾಜ* (೧೦), ೩೪೪–೩೫೦.

ಖಚಿಟಚಿಡಿಚಿಡಜ ಒ..ಃ.(೨೦೧೭) .ಆಡಿ. ಃ. ಖ. ಂಟ್ಟಾಜ್ಞಾಚಿಡಿ. ಗಿಜ್ಞಾಚಿ ಟ್ಟಾ ಆಚಿಟ್ಟಾ ಒಡ್ಡಾಟ್ಟಾಣ (ಖ್ಯಾಣಜ್ಞಾಟ್ಟಾಡಿ ೨೮, ೨೦೧೭). ಖಟಣಜ್ಞಾಡಿಟಚಿಣಾಟ್ಟಾಚಿಟ ಎಡ್ಡಾಡಿಟಚಿಟ ಡ್ಡಾ ಖಜ್ಞಾಚಿಡಿಟ್ಟಾ ಟ್ಟಾ ಇಟ್ಟಾಟ್ಟಾಟ್ಟಾ ಚಿಟಜ ಖ್ಯಾಟ್ಟಾಚಿಟ ಖ್ಯಾಟ್ಟಾಟ್ಟಾಜ (ಖಎಖಇಖ), ೭ (೯), ಂಡ್ಡಾಟ್ಟಾಚಿಟ್ಟಾಜ ಚಿಣ ಟ್ರಣಣರಿ://ಡಿಟ.ಟ್ಟಾಟ್ಟಾ/ಚಿಟ್ಟಾಣಡಿಚಿಟ್ಟಾಣ=೩೦೬೧೦೫೦

ಖಚಿಟಚಿಡಿಚಿಡಜ ಒ.ಃ,– ಕ್ಷಡ್ಡಿರಿಜ್ಞಾಣಾಜ್ಞಾ ಟ್ಟಾ ಫಟ್ಟಾಟ್ಟಾ ಇಟ್ಟಾಟಿಜ್ಞಾಡಿಟ್ಟಾಣ (ಂಠಿಡಿಟ್ಟಾ ೧೬, ೨೦೧೭). ಖ್ಯಾಡಿಜ ಅಟ್ಟಾಟ್ಟಾಜ್ಞಾಣ, ೩೧(೩೬೨) ಂಡ್ಡಾಟ್ಟಾಚಿಟ್ಟಾಜ ಚಿಣ ಟ್ರಣಣರಿ://ಡಿಟ.ಟ್ಟಾಟ್ಟಾ/ಚಿಟ್ಟಾಣಡಿಚಿಟ್ಟಾಣ=೨೯೩೮೮೮೩

ಆ್ಯಚಿತ್ಯಾಚಿಟಣ್ಣಾತಿಚಿಡಿ ಅ ೧ ಚಿಟಜ ಖಿತಿಚಿಜ್ಞಾ ಖ ಐ. (೨೦೧೬), ಅಖ್ಯಾ ಚಿಟಜ ಇಟ್ಟಾಟಿಜ್ಞಾಡಿಟ್ಟಾಣ ಡ್ಡಾ ಒಚಿಡಿಟ್ಟಾಚಿಟ್ಟಾಜ ಖ್ಯಾಟ್ಟಾಣಾಟ್ಟಾ, *ಖಟಣಜ್ಞಾಡಿಟಚಿಣಾಟ್ಟಾಚಿಟ ಖಜ್ಞಾಚಿಡಿಟ್ಟಾ ಎಡ್ಡಾಡಿಟಚಿಟ ಡ್ಡಾ ಖ್ಯಾಟ್ಟಾಚಿಟ ಖ್ಯಾಟ್ಟಾಟ್ಟಾಜ ೫*, (೧೧), ೩೨–೩೪.

ಆ್ಯಚಿತ್ಯಾಚಿಟಣ್ಣಾತಿಚಿಡಿ, ಅ.೧, (೨೦೧೭). ಇಟ್ಟಾಟಿಟಥಿಟ್ಟಾಣ ಔಠಿಠಿಡಿಣಣಾಟ್ಟಾಜ ಜಿಡಿ ಒಚಿಡಿಟ್ಟಾಚಿಟ್ಟಾಜ ಖ್ಯಾಟ್ಟಾಣಾಟ್ಟಾ ಡ್ಡಾ ಅಖ್ಯಾ – ಖ್ಯಾಡಿಜ ಅಟ್ಟಾಟ್ಟಾಜ್ಞಾಣ – *ಂಟ್ಟಾ ಖಟಣಜ್ಞಾಡಿಟಚಿಣಾಟ್ಟಾಚಿಟ ಎಡ್ಡಾಡಿಟಚಿಟ ಡ್ಡಾ ಖಜಜ್ಞಾ, ೩೧*(೩೬೯) ೨೮–೩೧, ಓಡ್ಡಾಟ್ಟಾಟ್ಟಾಡಿ ಂಡ್ಡಾಟ್ಟಾಚಿಟ್ಟಾಜ ಚಿಣ ಟ್ರಣಣರಿ://ಡಿಟ.ಟ್ಟಾಟ್ಟಾ/ಚಿಟ್ಟಾಣಡಿಚಿಟ್ಟಾಣ=೩೦೬೪೬೮೩.

ಏಚಿಟ್ಟಾಟ್ಟಾಜ ಖಚಿಟ್ಟಾ ಚಿಟಜ ಆ್ಯಚಿತ್ಯಾಚಿಟಣ್ಣಾತಿಚಿಡಿ (೨೦೧೪),,ಂಟ್ಟಾಜ್ಞಾಚಿಡಿ. ಗಿಜ್ಞಾಚಿ ಟ್ಟಾ ಖಟಜಠ-ಕ್ಷಿಇಾ ಕ್ಷಿಡಿಣಾಟ್ಟಾ ಚಿಟಜ ಖ್ಯಾಟ್ಟಾಚಿಟ ಅಟ್ಟಾಟ್ಟಾಜ್ಞಾಡಿಟ *ಖಟಣಜ್ಞಾಡಿಟಚಿಣಾಟ್ಟಾಚಿಟ ಎಡ್ಡಾಡಿಟಚಿಟ ಡ್ಡಾ ಖಜ್ಞಾಚಿಡಿಟ್ಟಾ ಟ್ಟಾ ಅಟ್ಟಾಟ್ಟಾಜ್ಞಾಡಿಟ್ಟಾಜ ಇಟ್ಟಾಟ್ಟಾಟ್ಟಾ & ಒಚಿಟಟಚಿಡ್ಡಾಟ್ಟಾಣ*, .೪(೧), ಂಡ್ಡಾಟ್ಟಾಚಿಟ್ಟಾಜ ಚಿಣ ಟ್ರಣಣರಿ://ಡಿಟ.ಟ್ಟಾಟ್ಟಾ/ಚಿಟ್ಟಾಣಡಿಚಿಟ್ಟಾಣ=೨೮೬೩೮೪೨

ಏಚಿಟ್ಟಾಟ್ಟಾಜ್ಞಾ. ಚಿಟಜ ಒಚಿಡಿಚಿಡಿ ಖಗಿ(೨೦೧೬). ಆಡಿ. ಃ ಖ ಂಟ್ಟಾಜ್ಞಾಚಿಡಿ. ಖ್ಯಾಟ್ಟಾಚಿಟ ಒಡ್ಡಾಟ್ಟಾಣ ಚಿಟಜ ಘ ಈಟ್ಟಾಟಿಟಚಿಜ್ಞಾ ಟ್ಟಾ ಗಿಟಿಚಿಥಿಚಿಠಿಣಿ ಆ್ಯಾಡಿಟ್ಟಾಣ ಖಟಜ್ಞಾ ಊ್ಯಾಡಿಟ್ಟಾಚಿಟ ಗಿಜ್ಞಾ, *ಖಟಣ. ಖಜ ಎ. ಖ್ಯಾಟ್ಟಾಚಿಟ ಖ್ಯ.೫* (೪), ೪೩–೪೫,

ಒಚಿಡಿಚಿಡಿ,ಖಗಿ., ಚಿಟಜ ಏಚಿಟಟಟಾಟ್ಟಾಜ್ಞಾಚಿಡಿ, ಖ ಏ., (೨೦೧೬). ಆಡಿ. ಃ ಖ ಂಟ್ಟಾಜ್ಞಾಚಿಡಿ ಖ ಖಜ್ಞಾಟಚಿಣಾಟ್ಟಾ ಫ್ಯಾ ಓಡಿಣ್ಣಾ ಏಚಿಡಿಟಚಿಣಚಿಜ್ಞಾಚಿ, *ಎಡ್ಡಾಡಿಟಚಿಟ ಔಜ ಖಟಣಜ್ಞಾಡಿಟಚಿಣಾಟ್ಟಾಚಿಟ ಂಥಿಚಿಜಜ್ಞಾಟ್ಟಾ ಖಜ್ಞಾಚಿಡಿಟ್ಟಾ ಈಡಿ ಒಣ್ಣಾಣಜ್ಞಾಟ್ಟಾಟಿಟ್ಟಾಟಿಚಿಡಿಥಿ ೪*(೧).

ಒಜ್ಞಾಡಿಚಿ,ಖ (೨೦೦೨.).ಂಟ್ಟಾಜ್ಞಾಚಿಡಿ. ಕ್ಷಡ್ಡಿರಿಜ್ಞಾಣಾಜ ಟ್ಟಾ ಖ್ಯಾಚಿಣಜ ಅಚಿಣಜ ಚಿಟಜ ಖ್ಯಾಟ್ಟಾಚಿಟ ಎಣ್ಣಾಟ್ಟಾಜ (ಇಜ) ಖಚಿಟರಿಚಿಥಿ ಕ್ಷಿಚಿಇಾಚ್ಚಿಚಿಟ.

ಕಾಳೆ(೧೯೯೬) –ಸ್ತ್ರೀ ವಿಮೋಚನಾ ಹೋರಾಟಗಳು, ಅನಾರ್ಯ ಪ್ರಕಾಶನ, ಧಾರವಾಡ–

ಡಾ. ಮುಡಬಿ. ಃ.(೨೦೦೫) ಮಹಿಳಾ ಸಬಲೀಕರಣ ಅಂಬೇಡ್ಕರ್ ದೃಷ್ಟಿಕೋನ, ಲಕ್ಷ್ಮಿ ಪ್ರಕಾಶನ, ಬೆಂಗಳೂರು

ಡಾ. ಅರವಿಂದ. ಮಾಲಗತ್ತಿ(೧೯೯೧) ಡಾ. ಅಂಬೇಡ್ಕರ್ ವಿಚಾರದಾರೆ, ಕನ್ನಡ ಮತ್ತು ಸಂಸ್ಕೃತ ಇಲಾಖೆ, ಬೆಂಗಳೂರು.

ಗಿಜಥಿಚ್ಚಿಚಿಡಿಚಿ ಖ.ಖ(೨೦೦೫) –ಅಟ್ಟಾಟ್ಟಾಜ್ಞಾಣ ಡ್ಡಾ ಊ್ಯಾಟ್ಟಾಚಿಟ್ಟಾ ಡ್ಡಾ ಆಡಿ. ಂಟ್ಟಾಜ್ಞಾಚಿಡಿ, ಂಃಆ ಕ್ಷಾಟ್ಟಾಟ್ಟಾಜ್ಞಾ ,ಎಚಿಟ್ಟಾಣಡಿ ಖಟಜ್ಞಾ.

ISARA INSTITUTE OF MANAGEMENT & PROFESSIONAL STUDIES

RESEARCH GATEWAY

AROGYAM ONLINE

PARIVARTAN PSYCHOLOGY CENTER

भारतीय भाषा, शिक्षा, साहित्य एवं शोध

ISSN 2321 – 9726

WWW.BHARTIYASHODH.COM

INTERNATIONAL RESEARCH JOURNAL OF MANAGEMENT SCIENCE & TECHNOLOGY

ISSN – 2250 – 1959 (0) 2348 – 9367 (P)

WWW.IRJMST.COM

INTERNATIONAL RESEARCH JOURNAL OF COMMERCE, ARTS AND SCIENCE

ISSN 2319 – 9202

WWW.CASIRJ.COM

INTERNATIONAL RESEARCH JOURNAL OF MANAGEMENT SOCIOLOGY & HUMANITIES

ISSN 2277 – 9809 (0) 2348 - 9359 (P)

WWW.IRJMSH.COM

INTERNATIONAL RESEARCH JOURNAL OF SCIENCE ENGINEERING AND TECHNOLOGY

ISSN 2454-3195 (online)

WWW.RJSET.COM

INTEGRATED RESEARCH JOURNAL OF MANAGEMENT, SCIENCE AND INNOVATION

ISSN 2582-5445

WWW.IRJMSI.COM

JOURNAL OF LEGAL STUDIES,POLITICS AND ECONOMICS RESEARCH

WWW.JLPER.COM